# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-1900/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 20/04/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಕೆ. ಶ್ರೀಷ ಉಪಾಧ್ಯ, ಲಕ್ಷ್ಮೀಂದ್ರನಗರ, ಉಡುಪಿ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಕೆ. ಶ್ರೀಷ ಉಪಾಧ್ಯ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಉಡುಪಿ ತಾಲ್ಲೂಕಿನ ಶಿವಳ್ಳಿ ಗ್ರಾಮದ ಶ್ರೀ ದಾಮೋದರ ಐತಾಳ್, ಸಂಚಾಲಕರು, ಬಳಕೆದಾರರ ವೇದಿಕೆ, ಉಡುಪಿ ಇವರ ವಿರುದ್ಧ ಕರ್ನಾಟಕ ಮಾಹಿತಿ ಆಯೋಗದಲ್ಲಿ ಹೂಡಿದ್ದ ಪ್ರಕರಣ ಸಂಖ್ಯೆ: 12247, 12249, 14114/2010ರ ಮೇಲ್ಮನವಿ ಪ್ರಕರಣಗಳಲ್ಲಿ ಕರ್ನಾಟಕ ಮಾಹಿತಿ ಹಕ್ಕು ಆಯೋಗವು ವಿಚಾರಣೆ ನಡೆಸಿದ ನಂತರ ರೂ.50,000/- ದಂಡವನ್ನು ಶ್ರೀ ದಾಮೋದರ ಐತಾಳ್ ರವರಿಗೆ ವಿಧಿಸಿರುತ್ತದೆ. ಸದರಿ ದಂಡವನ್ನು ಭೂ ಕಂದಾಯ ಬಾಕಿ ವಸೂಲಾತಿಗಾಗಿ ತೆಗೆದುಕೊಳ್ಳುವ ಕ್ರಮದಂತೆ ಕ್ರಮ ಜರುಗಿಸಿ ಉಡುಪಿ ತಹಶೀಲ್ದಾರ್‌ರವರು ಬಾಕಿ ವಸೂಲಾತಿಗಾಗಿ ಆದೇಶಿಸಿರುತ್ತಾರೆ. ಎದುರುದಾರರಾದ ರಾಜಸ್ವ ನಿರೀಕ್ಷಕರಾದ ಶ್ರೀ ಶಿವರಾಮ್ ಇವರು ಸದರಿ ದಂಡವನ್ನು ವಸೂಲಾತಿ ಮಾಡದೇ ವಿಳಂಭ ನೀತಿಯನ್ನು ಅನುಸರಿಸುತ್ತಿರುತ್ತಾರೆ. ಇವರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿದ್ದು, ಸದರಿ ದೂರು ಅರ್ಜಿಯನ್ನು ಕಂಪ್ಲೇಂಟ್/ಲೋಕ್/ಎಂವೈಎಸ್/1465/2014 ಎಂದು ನೋಂದಾಯಿಸಲ್ಪಟ್ಟಿದ್ದು, ಸದರಿ ಪ್ರಕರಣದಲ್ಲಿ ಮಾನ್ಯ ಲೋಕಾಯುಕ್ತರು ಎದುರುದಾರರಿಗೆ ಕ್ರಮ ಜರುಗಿಸುವಂತೆ ಆದೇಶಿಸಿ, ಆದೇಶದ ಕೊನೆಯಲ್ಲಿ ಎದುರುದಾರರು ಕ್ರಮ ಜರುಗಿಸದೇ ಇದ್ದಲ್ಲಿ "It is open for the complainant to approach Lokayukta Office in case of non-compliance" ಎಂದು ಆದೇಶಿಸಿರುತ್ತಾರೆ. ಆದ್ದರಿಂದ, 2 ವರ್ಷಗಳಾದರೂ ಎದುರುದಾರರು ಯಾವುದೇ ಕ್ರಮ ಜರುಗಿಸದೇ ಇರುವ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ನಷ್ಟ ಉಂಟಾಗಿರುತ್ತದೆ ಹಾಗೂ

ಎದುರುದಾರರು ಕರ್ತವ್ಯಲೋಪವೆಸಗಿರುತ್ತಾರೆ. ಆದ್ದರಿಂದ, ಅವರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ಈವರೆವಿಗೂ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

3. ದೂರಿನಂಶಗಳನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಕರ್ನಾಟಕ ಮಾಹಿತಿ ಆಯೋಗವು ದಿ:02/07/2013 ರಂದು ಆದೇಶ ಹೊರಡಿಸಿ "Commission once again directs Sri Dhamodhar Ithal, Convenor, Udupi District Consumer, Udupi District to remit the penalty of Rs.50,000/- levied on him within 30 days to the following State Government Head of Account, under the compliance to the Commission. Further, Commission also directs the Deputy Comissioner, Udupi District to recover the penalty of Rs.50,000/- levied on Sri Dhamodhar Ital, Convenor, Udupi District Consumer, Udupi District and remit it to the above State Government Account under intimation to the Commission, if the respondent doesn't remit the penalty within a period of 30 days" ಎಂದು ಆದೇಶಿಸಿದ್ದು, ಆದೇಶದ ಪ್ರತಿಯಿಂದ ಕಂಡು ಬರುತ್ತದೆ (ಸದರಿ ಆದೇಶದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಸದರಿ ಆದೇಶದ ಮೇರೆಗೆ ತಹಶೀಲ್ದಾರ್, ಉಡುಪಿ ಇವರು "ಸದರಿ ಬಾಕಿದಾರರಿಂದ ರೂ.50,000/- ದಂಡನೆಯನ್ನು ಕೂಡಲೇ ವಸೂಲಾತಿ ಮಾಡಲು ಆದೇಶ ನೀಡಿದೆ. ಸದರಿಯವರ ಬಳಿ ಇರುವ ಆಸ್ತಿ ಯ ವಾಹನವನ್ನಾಗಲೀ ಜಪ್ತಿಗೊಳಿಸಿ ಕೂಡಲೇ ಶ್ರೀ ದಾಮೋದರ ಐತಾಳ್ ಇವರಿಂದ ವಸೂಲಿ ಮಾಡಿ ಕೂಡಲೇ ಸೂಕ್ತ ಕ್ರಮ ಕೈಗೊಂಡು ವಸೂಲಾತಿಗೆ ಆದೇಶ ನೀಡಿದೆ ಎಂದು ತಿಳಿಸಿ ಕಂದಾಯ ನಿರೀಕ್ಷಕರು ಉಡುಪಿ ಇವರಿಗೆ ಸೂಕ್ತ ಕ್ರಮ ಜರುಗಿಸಲು ಆದೇಶ ನೀಡಿದೆ ಎಂದು ತಿಳಿಸಿರುವುದು, ಸದರಿ ಆದೇಶದ ಪ್ರತಿಯಿಂದ ಕಂಡು ಬರುತ್ತದೆ. (ಸದರಿ ಆದೇಶದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಸದರಿ ಆದೇಶದಲ್ಲಿ ಪ್ರಕರಣವನ್ನು ಹಣ ವಸೂಲಾತಿಗಾಗಿ ಕಂದಾಯ ನಿರೀಕ್ಷಕರು ಉಡುಪಿ ಇವರಿಗೆ ವಹಿಸಿರುವುದು ಕಂಡು ಬರುತ್ತದೆ. ಅದರಂತೆ, ಕಂದಾಯ ನಿರೀಕ್ಷಕರು ಶ್ರೀ ದಾಮೋದರ ಐತಾಳ್ ರವರಿಂದ ರೂ.50,000/- ಮೊತ್ತದ ಹಣವನ್ನು ಹಿಂಪಡೆಯಲು ಕ್ರಮ ಜರುಗಿಸಬೇಕಾಗಿದ್ದು, ಇದುವರೆಗೂ ಸದರಿಯವರು ಯಾವುದೇ ಕ್ರಮ ಜರುಗಿಸಿರುವುದು ಕಂಡು ಬರುವುದಿಲ್ಲ. ಸದರಿಯವರಿಗೆ ದೂರುದಾರರ ದೂರಿನ ಮೇಲೆ ಆಕ್ಷೇಪಣೆ ಸಲ್ಲಿಸಲು ತಿಳಿಸಿ ಪತ್ರ

ಬರೆದಾಗ್ಯೂ ಸಹ ಯಾವುದೇ ಉತ್ತರವನ್ನು ಸಲ್ಲಿಸಿರುವುದಿಲ್ಲ. ಶ್ರೀ ದಾಮೋದರ ಐತಾಳ್ ರವರಿಂದ ರೂ.50,000/- ಸರ್ಕಾರಕ್ಕೆ ಜಮಾ ಆಗಿಲ್ಲವೆಂದು ಸ್ಪಷ್ಟ ಪಡುತ್ತದೆ.

4. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಸರ್ಕಾರಕ್ಕೆ ಬರಬೇಕಾಗಿದ್ದ ದಂಡದ ಮೊತ್ತವಾದ ರೂ.50,000/- ವನ್ನು ತಕ್ಷಣವೇ ಹಿಂಪಡೆಯಲು (recover) ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 20/11/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**